

# ಸೆಮಿಫೈನಲ್ ತಲುಪುವ ಗುರಿ: ಶ್ರೀಹರಿ

ಸತತ ಎರಡನೇ ಬಾರಿಗೆ ಒಲಿಂಪಿಕ್ಸ್‌ಗೆ ಅರ್ಹತೆ ಪಡೆದುಕೊಂಡಿರುವ ಬೆಂಗಳೂರಿನ ಈಜುಪಟು ಶ್ರೀಹರಿ ನಟರಾಜ್ ಅವರಿಗೆ ಪ್ಯಾರಿಸ್ ಒಲಿಂಪಿಕ್ಸ್‌ನಲ್ಲಿ ಕನಿಷ್ಠ ಸೆಮಿಫೈನಲ್ ತಲುಪಬೇಕು ಎನ್ನುವ ಗುರಿಯಿದೆ.

ದಕ್ಷಿಣ ಏಷ್ಯಾ ಕ್ರೀಡಾಕೂಟದಲ್ಲಿ ಒಂದೇ ವರ್ಷ ನಾಲ್ಕು ವಿವಿಧ ವಿಭಾಗಗಳಲ್ಲಿ ಚಿನ್ನದ ಪದಕಗಳನ್ನು ಗೆದ್ದಿರುವ ಶ್ರೀಹರಿ 2019ರಲ್ಲಿ ವಿಶ್ವ ಈಜು ಚಾಂಪಿಯನ್‌ಷಿಪ್‌ನಲ್ಲಿ ದೇಶವನ್ನು ಪ್ರತಿನಿಧಿಸಿದ್ದರು. ಇದಕ್ಕೂ ಒಂದು ವರ್ಷ ಮೊದಲು ಯೂತ್ ಒಲಿಂಪಿಕ್ಸ್‌ನಲ್ಲಿ ಪಾಲ್ಗೊಂಡಿದ್ದರು. ಈಗ ಪ್ಯಾರಿಸ್ ಟಿಕೆಟ್ ಕೂಡ ಖಚಿತಪಡಿಸಿಕೊಂಡಿದ್ದಾರೆ.

'ಒಲಿಂಪಿಕ್ಸ್‌ಗೆ ಸ್ಪರ್ಧೆಯ ಮೂಲಕವೇ ಅರ್ಹತೆ ಪಡೆದುಕೊಳ್ಳುವ ಗುರಿ ಈಡೇರಲಿಲ್ಲ. ಅದೃಷ್ಟವಶಾತ್ ಯುನಿವರ್ಸಲಿಟಿ ಪ್ಲೇಸಸ್ ಕ್ವಾಲಿಫಿಕೇಷನ್ ವ್ಯವಸ್ಥೆಯಡಿ ಅವಕಾಶ ಲಭಿಸಿದೆ. ಕ್ರೀಡಾಕೂಟ ಆರಂಭವಾಗಲು ಕೆಲವು ದಿನಗಳು ಬಾಕಿಯಿದ್ದು ಮತ್ತಷ್ಟು ಅಭ್ಯಾಸ ಆರಂಭಿಸಿದ್ದೇನೆ' ಎಂದು ಹೇಳುತ್ತಾರೆ ಶ್ರೀಹರಿ.

'ದೇಶದಲ್ಲಿಯೇ ಬೆಂಗಳೂರು ಈಜು ಕ್ರೀಡೆಯ ಶಕ್ತಿಕೇಂದ್ರವಾಗಿದೆ. ಬೇರೆ ಬೇರೆ ರಾಜ್ಯದವರು ಕೂಡ ಬೆಂಗಳೂರಿಗೆ ಬಂದು ಅಭ್ಯಾಸ ಮಾಡುತ್ತಾರೆ. ಸ್ಪರ್ಧೆಯೂ ಸಾಕಷ್ಟು ಇದೆ. ಹೀಗಾಗಿ ಕಠಿಣ ಪರಿಶ್ರಮ ಪಟ್ಟು ಅಭ್ಯಾಸ ಮಾಡುತ್ತಿರುವೆ. ಒಲಿಂಪಿಕ್ಸ್‌ನಂಥ ಭವ್ಯ ವೇದಿಕೆಯಲ್ಲಿ ಭಾರತದ ಈಜುಪಟುಗಳಿಗೆ ದೊಡ್ಡ ಸಾಧನೆ ಸಾಧ್ಯವಾಗಿಲ್ಲ. ಈ ಕೊರಗು ಕಡಿಮೆ ಮಾಡಲು ಪ್ರಯತ್ನಿಸುವೆ. ಅಗ್ರ 16ರ ಒಳಗೆ ಸ್ಥಾನ ಪಡೆಯಬೇಕು, ಸೆಮಿಫೈನಲ್ ತಲುಪಿದರೆ ಪದಕ ಜಯಿಸಿದ್ದಕ್ಕಿಂತಲೂ ಹೆಚ್ಚು ಖುಷಿಯಾಗುತ್ತದೆ' ಎಂದು ಹೇಳುತ್ತಾರೆ.



1988ರ ಒಲಿಂಪಿಕ್ಸ್‌ನಲ್ಲಿ ದಕ್ಷಿಣ ಕೊರಿಯಾ ವಿರುದ್ಧದ ಪಂದ್ಯದಲ್ಲಿ ಭಾರತ ತಂಡದ ಪ್ರದರ್ಶನ

### ಪದಕ ಗಳಿಕೆ: ಅಮೆರಿಕದ್ದೇ ಅಗ್ರಸ್ಥಾನ

ಒಲಿಂಪಿಕ್ಸ್‌ನಲ್ಲಿ ಪದಕ ಗೆಲ್ಲುವಲ್ಲಿ ಅಮೆರಿಕ ಮತ್ತು ರಷ್ಯಾ ದೇಶಗಳು ಮುಂಚೂಣಿಯಲ್ಲಿವೆ. 1896ರ ಚೊಚ್ಚಲ ಅಥೆನ್ಸ್ ಒಲಿಂಪಿಕ್ಸ್‌ನಿಂದ ಪಾಲ್ಗೊಳ್ಳುತ್ತಿರುವ ಅಮೆರಿಕ ಇದುವರೆಗೆ ಒಟ್ಟು 2,629 ಪದಕಗಳನ್ನು ಜಯಿಸಿದ್ದು, ಚಿನ್ನದ ಪದಕಗಳ ಸಂಖ್ಯೆಯೇ 1,061 ಇದೆ. ರಷ್ಯಾ 1,624 ಪದಕಗಳನ್ನು ಜಯಿಸಿ ಒಟ್ಟು ಪದಕಗಳನ್ನು ಗೆದ್ದವರ ಪಟ್ಟಿಯಲ್ಲಿ ಎರಡನೇ ಸ್ಥಾನ ಹೊಂದಿದೆ.

ಜರ್ಮನಿ (1,386 ಪದಕಗಳು), ಗ್ರೇಟ್ ಬ್ರಿಟನ್ (916), ಚೀನಾ (636), ಫ್ರಾನ್ಸ್ (751), ಇಟಲಿ (618), ಹಂಗರಿ (511), ಆಸ್ಟ್ರೇಲಿಯಾ (547) ಮತ್ತು ಜಪಾನ್ (497) ನಂತರದ ಎಂಟು ಸ್ಥಾನಗಳಲ್ಲಿವೆ.

### ಈಜುಕೊಳದಲ್ಲಿ ಕರ್ನಾಟಕದ ಇಬ್ಬರು

ಒಲಿಂಪಿಕ್ಸ್‌ನ ಈಜುಕೊಳದಲ್ಲಿ ಭಾರತದ ಸ್ಪರ್ಧಿಗಳು ಇದುವರೆಗೆ ಅಮೆರಿಕ, ಆಸ್ಟ್ರೇಲಿಯಾ, ರಷ್ಯಾ ದೇಶಗಳ ಸ್ಪರ್ಧಿಗಳಿಗೆ ಸವಾಲೊಡ್ಡುವಷ್ಟು ಪ್ರಬಲರಾಗಿಲ್ಲ. ಈ ಬಾರಿ ಯುನಿವರ್ಸಲಿಟಿ ಪ್ಲೇಸಸ್ ಕ್ವಾಲಿಫಿಕೇಷನ್ ವ್ಯವಸ್ಥೆಯಡಿ ಕರ್ನಾಟಕದ ಧಿನಿಧಿ ದೇಸಿಂಗು ಮತ್ತು ಶ್ರೀಹರಿ ನಟರಾಜ್ ಪ್ಯಾರಿಸ್ ಒಲಿಂಪಿಕ್ಸ್‌ನಲ್ಲಿ ಸ್ಪರ್ಧಿಸಲು ಅರ್ಹತೆ ಗಳಿಸಿದ್ದಾರೆ.

14 ವರ್ಷದ ಧಿನಿಧಿ ಮಹಿಳೆಯರ ವಿಭಾಗದಲ್ಲಿ ಆಯ್ಕೆಯಾದ ಕಿರಿಯ ಈಜುಪಟುವಾಗಿದ್ದಾರೆ. ಅಗ್ರ ರ‍್ಯಾಂಕ್ ಗಳಿಸಿರುವ ದೇಶದ ಇಬ್ಬರು ಈಜುಪಟುಗಳನ್ನು ಒಲಿಂಪಿಕ್ಸ್‌ಗೆ ಆಯ್ಕೆ ಮಾಡುವ ಅವಕಾಶ 'ರಾಷ್ಟ್ರೀಯ ಈಜು ಫೆಡರೇಷನ್'ಗೆ ಇರುತ್ತದೆ. ಭಾರತ ಈಜು ಫೆಡರೇಷನ್ ಮಹಿಳೆಯರ ವಿಭಾಗದಲ್ಲಿ ಧಿನಿಧಿ (749 ಅಂಕ) ಮತ್ತು ಪುರುಷರ ವಿಭಾಗದಲ್ಲಿ ಶ್ರೀಹರಿ (849 ಅಂಕ) ಅವರಿಗೆ ಅವಕಾಶ ಲಭಿಸಿದೆ. ಶ್ರೀಹರಿಗೆ ಇದು ಎರಡನೇ ಅವಕಾಶವಾಗಿದ್ದು ಹಿಂದಿನ ಒಲಿಂಪಿಕ್ಸ್‌ಗೆ ಅರ್ಹತೆ ಪಡೆದುಕೊಂಡಿದ್ದರು.

ಪದಕಗಳ ಭರವಸೆ ಮೂಡಿಸಿರುವ ಹಲವು ಕ್ರೀಡಾಪಟುಗಳ ಜೊತೆಗೆ ಆರ್ಚರಿ (ಬಿಲ್ಲುಗಾರಿಕೆ) ಸ್ಪರ್ಧೆಯ ಕಣದಲ್ಲಿರುವ ಆರು ಗುರಿಕಾರರು, 28 ಅಥ್ಲೀಟ್‌ಗಳು, ಈಕ್ವೆಸ್ಟ್ರಿಯನ್‌ನಲ್ಲಿ ಒಬ್ಬರು, ರೋವಿಂಗ್, ಸೇಲಿಂಗ್, ಟೇಬಲ್ ಟೆನಿಸ್ ಹಾಗೂ ಟೆನಿಸ್ ಹೀಗೆ ಅನೇಕ ಕ್ರೀಡೆಗಳಲ್ಲಿ ಭಾರತವನ್ನು ಪ್ರತಿನಿಧಿಸಲಿದ್ದಾರೆ.

ಶೂಟಿಂಗ್ ಕ್ರೀಡೆಯಲ್ಲಿ ಭಾರತ ಹಿಂದೆ ಒಲಿಂಪಿಕ್ಸ್‌ನಲ್ಲಿ ಹಲವು ಪದಕಗಳನ್ನು ಬಾಚಿಕೊಂಡಿದೆ. ರಾಜ್ಯವರ್ಧನ ಸಿಂಗ್ ರಾಠೋಡ್, ಅಭಿನವ್ ಬಿಂದ್ರಾ, ವಿಜಯ ಕುಮಾರ್, ಗಗನ್ ನಾರಂಗ್, ಎಲ್ಲರೂ ನಿಖರ ಗುರಿಯಿಟ್ಟು ಪದಕ ಬೇಟೆಯಾಡಿದ್ದಾರೆ. ಆದರೆ ಹಿಂದಿನ ಎರಡು ಒಲಿಂಪಿಕ್ಸ್‌ಗಳಿಂದ ಭಾರತದ ಶೂಟರ್‌ಗಳಿಂದ ಭರವಸೆಯ ಪ್ರದರ್ಶನ ಕಂಡುಬಂದಿಲ್ಲ. ಈ ಸಲದ ಸ್ಪರ್ಧೆಯಲ್ಲಿ ಪುರುಷರ ಮತ್ತು ಮಹಿಳೆಯರ ವಿಭಾಗದಲ್ಲಿ ತಲಾ ಹತ್ತು ಸ್ಪರ್ಧಿಗಳು ಪಾಲ್ಗೊಳ್ಳಲಿದ್ದಾರೆ. ಇದರಲ್ಲಿ ಅಚ್ಚರಿಯ ಫಲಿತಾಂಶ ಬಂದರೆ ಭಾರತದ ಒಲಿಂಪಿಕ್ಸ್ ಶೂಟಿಂಗ್ 'ಪದಕದ ಗುರಿ'ಯ ಹಳಿಗೆ ಮರಳಿದಂತಾಗುತ್ತದೆ.

ಒಲಿಂಪಿಕ್ಸ್ ಕುಂಭಮೇಳದಲ್ಲಿ ಎಲ್ಲ ರಾಷ್ಟ್ರಗಳಿಂದ ಜಿದ್ದಿನ ಪೈಪೋಟಿ ಇರುತ್ತದೆ. ಹಿಂದಿನ ಒಲಿಂಪಿಕ್ಸ್‌ನಲ್ಲಿ ಪದಕಗಳ 'ಶತಕ' ಬಾರಿಸಿರುವ ಅಮೆರಿಕ, ಅರ್ಧಶತಕ ಹೊಡೆದಿರುವ ಚೀನಾ, ಜಪಾನ್, ಗ್ರೇಟ್ ಬ್ರಿಟನ್ ರಾಷ್ಟ್ರಗಳಿಗೆ ಸವಾಲೊಡ್ಡುವ ಮಟ್ಟಿಗೆ ಭಾರತ ಕ್ರೀಡಾಶಕ್ತಿ ಗಳಿಸಿಕೊಂಡಿಲ್ಲ. ಆದರೆ, ಭಾರತ ಟೋಕಿಯೊದಲ್ಲಿ ಗೆದ್ದಿದ್ದ ಏಳು ಪದಕಗಳ 'ಸವಾಲು' ಮೀರಿ ಪ್ಯಾರಿಸ್‌ನಲ್ಲಿ ಪದಕಗಳ ಸಂಖ್ಯೆ ಹೆಚ್ಚಿಸಿಕೊಳ್ಳಬಹುದು ಎನ್ನುವ ನಿರೀಕ್ಷೆಯಿದೆ. ಇದು ಕ್ರೀಡಾಪಟುಗಳದ್ದಷ್ಟೇ ಅಲ್ಲ; ಕೋಟ್ಯಂತರ ಭಾರತೀಯರ ಹರಕೆ ಹಾಗೂ ಹಾರೈಕೆಯೂ ಹೌದು.

ಪ್ರತಿಕ್ರಿಯಿಸಿ: feedback@sudha.co.in